# ಕರ್ನಾಟಕ ಸರ್ಕಾರ

ಸಂಖ್ಯೆ: MED/570/MPS/2026 ದಿನಾಂಕ:10.09.2026

## ಸುತ್ತೋಲೆ

**ವಿಷಯ :** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ದತ್ತು ತೆಗೆದುಕೊಳ್ಳುವ ಕುರಿತು.

*******

ಸನ್ಮಾನ್ಯ ಮುಖ್ಯಮಂತ್ರಿಗಳ ನೂರು ದಿನಗಳ ಮಹತ್ವಕಾಂಕ್ಷೆಯ ಕಾರ್ಯಕ್ರಮಗಳಡಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ತಾಲ್ಲೂಕು ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅವಶ್ಯವಿರುವ ತಜ್ಞವೈದ್ಯರ ಸೇವೆಯನ್ನು ಒದಗಿಸಲು ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಪ್ರಸ್ತಾಪಿಸಲಾಗಿದೆ.

ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕೊರತೆ ಇರುವ ತಜ್ಞ ವೈದ್ಯರ ಹುದ್ದೆಗಳನ್ನು ಗುರುತಿಸಲಾಗಿದೆ. ಆದ ಕಾರಣ ವೈದ್ಯಕೀಯ ವಿದ್ಯಾಲಯಗಳಿಂದ ತಾಲ್ಲೂಕಾ ಆಸ್ಪತ್ರೆಗಳನ್ನು, ಸಮುದಾಯ ಆರೋಗ್ಯ ಕೇಂದ್ರಗಳನ್ನು ದತ್ತು ಪಡೆದು ಅವಶ್ಯವಿರುವ ಸ್ತ್ರೀರೋಗ ತಜ್ಞರು, ಅರವಳಿಕೆ ತಜ್ಞರು, ಮಕ್ಕಳ ತಜ್ಞರು, ಎಲಬುಕೀಲು ತಜ್ಞರು ಮತ್ತು ಇತರ ತಜ್ಞ ವೈದ್ಯರನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ತಜ್ಞ ವೈದ್ಯರನ್ನು ನೇಮಿಸುವುದರಿಂದ ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಆರೈಕೆ ಪಡೆಯುವ ಅರ್ಹ ರೋಗಿಗಳಿಗೆ ಸಮಗ್ರ, ಉತ್ತಮ ಗುಣಮಟ್ಟದ ಮತ್ತು ವಿಶೇಷ ಆರೋಗ್ಯ ಸೇವೆಗಳನ್ನು ನೀಡಲು ಸಹಕಾರಿಯಾಗುತ್ತದೆ.

**ಸದರಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದರಿಂದ ಆಗುವ ಪ್ರಯೋಜನೆಗಳು.**

I. ತಾಲ್ಲೂಕು ಮಟ್ಟದಲ್ಲಿ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯರ ಲಭ್ಯತೆಯಿಂದಾಗಿ, ರೋಗಿಗಳು ಜಿಲ್ಲಾ ಆಸ್ಪತ್ರೆ ಅಥವಾ ವೈದ್ಯಕೀಯ ಕಾಲೇಜುಗಳಿಗೆ ಪ್ರಯಾಣಿಸುವ ಅಗತ್ಯವನ್ನು ಕಡಿಮೆ ಮಾಡುತ್ತದೆ.

II. ಜಿಲ್ಲಾ ಆಸ್ಪತ್ರೆಗಳಲ್ಲಿ ರೋಗಿಗಳ ಅತಿಯಾದ ಜನಸಂದಣಿ ಕಡಿಮೆ ಮಾಡಲು ಸಹಕಾರಿಯಾಗುತ್ತದೆ.

III. ತಾಲ್ಲೂಕು ಮಟ್ಟದಲ್ಲಿ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯರ ಲಭ್ಯತೆಯಿಂದಾಗಿ ದೀರ್ಘಕಾಲದ ಕಾಯಿಲೆಗಳ ಚಿಕಿತ್ಸೆ ತುರ್ತು ಮತ್ತು ಶಸ್ತ್ರಚಿಕಿತ್ಸಾ ಸೇವೆಗಳನ್ನು ಬಲಪಡಿಸುವುದು.

IV. ತಾಲ್ಲೂಕು ಆಸ್ಪತ್ರೆಗಳು/ಸಿಎಚ್‌ಸಿಗಳಲ್ಲಿ ಅಸ್ತಿತ್ವದಲ್ಲಿರುವ ಮೂಲಸೌಕರ್ಯ ಉಪಕರಣಗಳು ಮತ್ತು ಆಸ್ಪತ್ರೆ ಹಾಸಿಗೆಗಳ ಉತ್ತಮ ಬಳಕೆ.

V. ನಿಯಮಿತ ಸಂವಹನ ಮತ್ತು CME ಮೂಲಕ ತಾಲ್ಲೂಕು ಆಸ್ಪತ್ರೆಗಳು ಮತ್ತು ಸಿಬ್ಬಂದಿಗಳ ಸಾಮರ್ಥ್ಯ ವೃದ್ಧಿ.

VI. ಟೆಲಿ-ಮೆಡಿಸಿನ್/ಮತ್ತು ಡಿಜಿಟಲ್ ಸಮಾಲೋಚನೆಗೆ ಅವಕಾಶ.

VII. ವೈದ್ಯಕೀಯ ವಿದ್ಯಾರ್ಥಿಗಳು, ಇಂಟರ್ನ್‌ಗಳು ಮತ್ತು ಸ್ನಾತಕೋತ್ತರ ಪದವಿ ಪಡೆದವರಿಗೆ ತಾಲ್ಲೂಕು ಆಸ್ಪತ್ರೆ ಸೇವೆಗಳಿಗೆ ನಿಯೋಜಿಸುವ ಮೂಲಕ ಬೋಧನೆ ಮತ್ತು ತರಬೇತಿ ಮೂಲಸೌಕರ್ಯವನ್ನು ಬಲಪಡಿಸುವುದು.

VIII. ಸುಧಾರಿತ ಸಮುದಾಯ ಆಧಾರಿತ ಕ್ಲಿನಿಕಲ್ ತರಬೇತಿ, ರೋಗದ ವಿವರ, ಆರೋಗ್ಯ ರಕ್ಷಣಾ ಅಗತ್ಯತೆಗಳು ಮತ್ತು ಗ್ರಾಮೀಣ ಆರೋಗ್ಯದ ಸಾಮಾಜಿಕ ನಿರ್ಣಾಯಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ.

IX. ತುರ್ತು, ಶಸ್ತ್ರಚಿಕಿತ್ಸಾ, ಪ್ರಸೂತಿ, ಮಕ್ಕಳ ಮತ್ತು ದೀರ್ಘಕಾಲದ ಕಾಯಿಲೆಗಳ ಪ್ರಕರಣಗಳು ಸೇರಿದಂತೆ ವಿವಿಧ ರೋಗಿಗಳಿಗೆ ಚಿಕಿತ್ಸೆ ನೀಡುವ ಮೂಲಕ ಹೆಚ್ಚಿನ ಅನುಭವ ಪಡೆಯಲು ಸಹಕಾರಿಯಾಗುತ್ತದೆ.

X. ವೈದ್ಯಕೀಯ ಸಂಶೋಧನೆಗೆ ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಾಗೂ ವೈದ್ಯರಿಗೆ ಸಹಕಾರಿಯಾಗುತ್ತದೆ.

ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳು, ತಲಾ ಒಂದು ತಾಲ್ಲೂಕು ಆಸ್ಪತ್ರೆ, ಒಂದು ಸಮುದಾಯ ಆರೋಗ್ಯ ಕೇಂದ್ರ (CHC) ಹಾಗೂ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು (PHC) ದತ್ತು ಪಡೆದು, ಅಗತ್ಯವಿರುವ ತಜ್ಞ ವೈದ್ಯಕೀಯ ಸೇವೆ, ತರಬೇತಿ, ಗುಣಮಟ್ಟ ಸುಧಾರಣೆ ಹಾಗೂ ಇತರೆ ಅಗತ್ಯ ಆರೋಗ್ಯ ಸೇವೆಗಳನ್ನು ಒದಗಿಸಲು ತೀರ್ಮಾನಿಸಲಾಗಿದೆ.

ಈ ಸಂಬಂಧ, ಪ್ರತಿ ವೈದ್ಯಕೀಯ ಕಾಲೇಜಿಗೆ ದತ್ತು ಪಡೆಯಬೇಕಾದ ಆರೋಗ್ಯ ಸಂಸ್ಥೆಗಳನ್ನು ಜಿಲ್ಲಾವಾರು ಗುರುತಿಸಿ, ವೈದ್ಯಕೀಯ ಕಾಲೇಜು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ನಡುವೆ ಜಿಲ್ಲಾ ಹಂತದಲ್ಲಿ ಅಧಿಕೃತ ಒಡಂಬಡಿಕೆ (MoU) ಮಾಡಿಕೊಳ್ಳಲು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ರಾಜ್ಯದಲ್ಲಿ ಆರೋಗ್ಯ ಸೇವೆಗಳ ಪರಿಣಾಮಕಾರಿ ಅನುಷ್ಠಾನ, ಮೇಲ್ವಿಚಾರಣೆ ಮತ್ತು ಗುಣಮಟ್ಟದ ಸುಧಾರಣೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಕೆಳಕಂಡಂತೆ ಜವಾಬ್ದಾರಿಗಳನ್ನು ಪರಸ್ಪರ ಹಂಚಿಕೆ ಮಾಡಿಕೊಂಡು ನಿರ್ವಹಿಸಲು ಕ್ರಮವಹಿಸುವುದು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜವಾಬ್ದಾರಿಗಳು**

1) ಜಿಲ್ಲಾ ಮಟ್ಟದಲ್ಲಿ ಸದರಿ ವೈದ್ಯಕೀಯ ವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು.

2) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯ ಸದರಿ ವಿಷಯದ ಬಗ್ಗೆ ಸಮನ್ವಯ ಸಾಧಿಸಿ ನಿಯಮಿತವಾಗಿ ವರದಿ ಸಲ್ಲಿಸುವುದು.

3) ಆಡಳಿತಾತ್ಮಕ ವ್ಯವಸ್ಥೆ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮಟ್ಟದಲ್ಲಿ ವೈದ್ಯಕೀಯ ಕಾಲೇಜುಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು, ದತ್ತು ಪಡೆದ ಪ್ರತಿ ಸಂಸ್ಥೆಗೆ ನೋಡಲ್ ಅಧಿಕಾರಿಯನ್ನು ನೇಮಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

4) ತಜ್ಞ ವೈದ್ಯರ ಹೊರರೋಗಿ ಸೇವೆಯ (Speciality OPD) ವ್ಯವಸ್ಥೆ: ಪ್ರತ್ಯೇಕ ಕೊಠಡಿ, ಪರೀಕ್ಷಾ ಸೌಲಭ್ಯ ಮತ್ತು ಉಪಕರಣಗಳು, ಶುಶ್ರೂಷಕರು ಹಾಗೂ ಸಹಾಯಕ ಸಿಬ್ಬಂದಿ, ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಪ್ರಯೋಗಾಲಯ ಸಿದ್ಧತೆಯನ್ನು ಒದಗಿಸುವುದು.

5) ಪೂರ್ವ ನೋಂದಣಿ (Pre-registration): ತಜ್ಞ ವೈದ್ಯರ ಭೇಟಿಯ ನಿಗದಿತ ದಿನಕ್ಕೆ ಮುಂಚಿತವಾಗಿ ಆಶಾ ಮತ್ತು ಆರೋಗ್ಯ ಕಾರ್ಯಕರ್ತರ ಮೂಲಕ ರೋಗಿಗಳನ್ನು ಗುರುತಿಸಿ, ರೆಫರಲ್ ಹಾಗೂ ಅಪಾಯಿಂಟ್‌ಮೆಂಟ್ ಪಟ್ಟಿಯನ್ನು ಸಿದ್ಧಪಡಿಸುವುದು.

6) ತುರ್ತು ರೋಗಿಗಳ ಸಾಗಾಣಿಕೆ: 108 ಆರೋಗ್ಯ ಕವಚ ಹಾಗೂ ಇತರ ಆಂಬ್ಯುಲೆನ್ಸ್ ಸೇವೆಗಳ ಮೂಲಕ ರೋಗಿಗಳ ರೆಫರಲ್, ಮೇಲ್ದರ್ಜೆಯ ಆಸ್ಪತ್ರೆಗೆ ರವಾನೆ ಮತ್ತು ಹಿಂದಿರುಗುವ ಸಾರಿಗೆ ವ್ಯವಸ್ಥೆ ಕಲ್ಪಿಸುವುದು.

7) ಔಷಧಿ ಮತ್ತು ಸಾಮಗ್ರಿ: ಅವಶ್ಯಕ ಔಷಧಿಗಳು, ಶಸ್ತ್ರಚಿಕಿತ್ಸಾ ಸಾಮಗ್ರಿಗಳು, ಪ್ರಯೋಗಾಲಯ ಕಾರಕಗಳು ಮತ್ತು ರಕ್ತನಿಧಿ ಸೌಲಭ್ಯವನ್ನು ಕೆ.ಎಸ್.ಎಂ.ಎಸ್.ಸಿ.ಎಲ್. ಮೂಲಕ ದಾಸ್ತಾನು ಇರಿಸಿ ಒದಗಿಸುವುದು.

8) ಸೇವೆಗಳ ಪ್ರಚಾರ, ಸೇವಾ ದಿನಗಳ ಫಲಕ ಪ್ರದರ್ಶನ, ಮಾಸಿಕ ವರದಿ ಸಂಗ್ರಹ ಹಾಗೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಆರೋಗ್ಯ ಮೇಲ್ವಿಚಾರಣಾ ಸಮಿತಿಗೆ ಮಂಡಿಸುವುದು.

**ವೈದ್ಯಕೀಯ ಶಿಕ್ಷಣ ಇಲಾಖೆಯ ಜವಾಬ್ದಾರಿಗಳು**

1) ಕಾಲೇಜು ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ನಡುವೆ ನಿರಂತರ ಸಮನ್ವಯ ಸಾಧಿಸುವುದು; ಪ್ರತಿ ಕಾಲೇಜಿನಲ್ಲಿ ಡೀನ್/ಪ್ರಾಂಶುಪಾಲರು ನೋಡಲ್ ಅಧಿಕಾರಿಯನ್ನು ನೇಮಿಸುವುದು.

2) ಮಾನವ ಸಂಪನ್ಮೂಲ ನಿಯೋಜನೆ: ತಜ್ಞ ವೈದ್ಯರು (Consultants), ಹಿರಿಯ ನಿವಾಸಿ ವೈದ್ಯರು (Senior Residents), ಸ್ನಾತಕೋತ್ತರ ವಿದ್ಯಾರ್ಥಿಗಳು (PG Residents) ಹಾಗೂ ವೈದ್ಯಾಧಿಕಾರಿಗಳನ್ನು ಅವಶ್ಯಕತೆಗೆ ಅನುಗುಣವಾಗಿ ದಿನನಿತ್ಯ, ವಾರಕ್ಕೊಮ್ಮೆ, ವಾರಕ್ಕೆರಡು ಬಾರಿ ಅಥವಾ ತಿಂಗಳಿಗೊಮ್ಮೆ ರೊಟೇಶನ್ ಆಧಾರದ ಮೇಲೆ ನಿಯೋಜಿಸುವುದು.

3) ಸೇವಾ ದಿನ ನಿಗದಿ (Fixed Day Service): ಪ್ರತಿ ದತ್ತು ಪಡೆದ ಸಂಸ್ಥೆಗೆ ಯಾವ ದಿನ ಯಾವ ವಿಭಾಗದ ಸೇವೆ ಲಭ್ಯವಿರುತ್ತದೆ ಎಂಬ ಮಾಸಿಕ ವೇಳಾಪಟ್ಟಿಯನ್ನು ಮುಂಚಿತವಾಗಿ ಸಿದ್ಧಪಡಿಸಿ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಒದಗಿಸುವುದು; ಇದರಿಂದ ರೋಗಿಗಳ ಪೂರ್ವ ನೋಂದಣಿಗೆ ಅನುಕೂಲವಾಗುತ್ತದೆ.

4) ಅನುಷ್ಠಾನದ ಮೇಲ್ವಿಚಾರಣೆ: ನಿಯೋಜಿತ ವೈದ್ಯರ ಸಂಖ್ಯಾಬಲ, ಹಾಜರಾತಿ ಹಾಗೂ ನೀಡಲಾದ ಹೊರರೋಗಿ, ಒಳರೋಗಿ ಮತ್ತು ಶಸ್ತ್ರಚಿಕಿತ್ಸಾ ಸೇವೆಗಳ ಪರಿಶೀಲನೆ ನಡೆಸುವುದು.

5) ಬೋಧನೆ ಮತ್ತು ತರಬೇತಿ: ದತ್ತು ಪಡೆದ ಸಂಸ್ಥೆಗಳ ಸಿಬ್ಬಂದಿಗೆ ಸಿ.ಎಂ.ಇ., ಕೌಶಲ್ಯ ತರಬೇತಿ ಮತ್ತು ಟೆಲಿ-ಮೆಡಿಸಿನ್ ಸಮಾಲೋಚನೆ ಏರ್ಪಡಿಸುವುದು.

6) ವಿದ್ಯಾರ್ಥಿಗಳ ಔಟ್‌ರೀಚ್: ವೈದ್ಯಕೀಯ ವಿದ್ಯಾರ್ಥಿಗಳು, ಇಂಟರ್ನ್‌ಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಗ್ರಾಮೀಣ ಆರೋಗ್ಯ ತರಬೇತಿಗಾಗಿ ದತ್ತು ಪಡೆದ ಸಂಸ್ಥೆಗಳಲ್ಲಿ ರಚನಾತ್ಮಕ ಪೋಸ್ಟಿಂಗ್ ಕಲ್ಪಿಸುವುದು.

7) ಸಂಶೋಧನೆ: ಗ್ರಾಮೀಣ ಆರೋಗ್ಯ, ರೋಗದ ವಿವರ ಮತ್ತು ಸೇವಾ ಫಲಿತಾಂಶಗಳ ಕುರಿತು ಸಂಶೋಧನೆ ಹಾಗೂ ದಾಖಲೀಕರಣ ಕೈಗೊಳ್ಳುವುದು.

8) ವರದಿ: ವೈದ್ಯಕೀಯ ಕಾಲೇಜಿನ ಡೀನ್/ಪ್ರಾಂಶುಪಾಲರು ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳು ಜಂಟಿಯಾಗಿ ಪ್ರತಿ ತಿಂಗಳು ನೀಡಲಾದ ಸೇವೆಗಳ ವರದಿಯನ್ನು ಎರಡೂ ಇಲಾಖೆಗಳ ಮುಖ್ಯಸ್ಥರಿಗೆ ಸಲ್ಲಿಸುವುದು.

**ಪ್ರಧಾನ ಕಾರ್ಯದರ್ಶಿಗಳು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**
**ಬೆಂಗಳೂರು.**

ರಿತ್ವಿಕ್ ಪಾಂಡೆ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

**ಅಪರ ಮುಖ್ಯ ಕಾರ್ಯದರ್ಶಿಗಳು**
**ವೈದ್ಯಕೀಯ ಶಿಕ್ಷಣ ಇಲಾಖೆ**
**ಬೆಂಗಳೂರು.**

ಮೊಹಮ್ಮದ್ ಮೊಹಸಿನ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)